ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002
ZILLA PANCHAYAT OFFICE, BELGAUM-590002
ದೂರವಾಣಿ Telephone 0831-2407201, 0831-2407206, 0831-2407213
ಫ್ಯಾಕ್ಸ್/Fax 0831-2429662
e-mail ceozpbelgaum@yahoo.com

ವಿಷಯ: ಸನ್-2013-14ನೇ ಸಾಲಿನ ಆರ್ಥಿಕ ವರ್ಷದಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ:1) ಈ ಕಾರ್ಯಾಲಯದ ಪತ್ರ ಸಂ:ಜಿಪಂಬೆ:ಯೋವಿ:ಗ್ರಾರಯೋ:13ನೇಹ: 2013-14 ದಿನಾಂಕ: 21-06-2013.
2) ಸರ್ಕಾರದ ಸುತ್ತೋಲೆ ಸಂ: ಗ್ರಾಅಪ:127:ಆರ್ಆರ್ಸಿ:13 ದಿ:16-11-2013.
3) ಸರ್ಕಾರದ ಆದೇಶ ಸಂ:ಗ್ರಾಅಪ:127/1:ಆರ್ಆರ್ಸಿ:13 ದಿ:03-12-2013.

## ಪ್ರಸ್ತಾವನೆ:

ಸನ್-2013-14 ನೇ ಸಾಲಿಗಾಗಿ 13ನೇ ಹಣಕಾಸು ಆಯೋಗದ ಯೋಜನೆಯಡಿ ಗ್ರಾಮೀಣ ರಸ್ತೆಗಳ ನಿರ್ವಹಣೆ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲು ಜಿಲ್ಲೆಯ ರೂ. 844.94 ಲಕ್ಷ ಅನುದಾನದ ಕ್ರಿಯಾ ಯೋಜನೆಯನ್ನು ದಿನಾಂಕ: 28-06-2013 ರಂದು ಜರುಗಿದ ವಿಶೇಷ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಸದರಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆಗಾಗಿ ಓದಲಾದ (1)ರಡಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ ಓದಲಾದ(2) ರಡಿ ಸರ್ಕಾರದಿಂದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತಾರೆ. ಅನುಮೋದಿತ ಕ್ರಿಯಾ ಯೋಜನೆಯನ್ವಯ ಓದಲಾದ(3) ರ ಸರ್ಕಾರದ ಆದೇಶದಲ್ಲಿ ಜಿಲ್ಲೆಗೆ ನಿಗದಿಪಡಿಸಿದ ಅನುದಾನ ರೂ. 844.94 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ -3054-80-196-1-04-300 - Block Grants - Lum sum ZP(ಯೋಜನೇತರ)(Link Head-3054-00-101-0-26) ರಡಿ ಬಿಡುಗಡೆಯಾಗಿದೆ. ಬಿಡುಗಡೆಯಾಗಿರುವ ಅನುದಾನವನ್ನು ಗ್ರಾಮೀಣ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಯ ಎರಡು ವಿಭಾಗಗಳಾದ ಪಂ.ರಾ.ಇಂ.ವಿಭಾಗ ಬೆಳಗಾವಿ ಇವರ ಕ್ರಿಯಾ ಯೋಜನೆಯಲ್ಲಿ ಅಡಕವಾಗಿರುವ 97 ಕಾಮಗಾರಿಗೆ ರೂ. 305.46 ಲಕ್ಷ ಹಾಗೂ ಚಿಕ್ಕೋಡಿ ಇವರ ಕ್ರಿಯಾ ಯೋಜನೆಯಲ್ಲಿ ಅಡಕವಾಗಿರುವ 155 ಕಾಮಗಾರಿಗೆ ರೂ. 539.48 ಲಕ್ಷ ಹೀಗೆ ಎರಡು ವಿಭಾಗದ ಸೇರಿ 252 ಕಾಮಗಾರಿಗಳಿಗೆ ಒಟ್ಟು ರೂ. 844.94 ಲಕ್ಷ ಅನುದಾನವನ್ನು ರಸ್ತೆ ಮತ್ತು ಸೇತುವೆ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಬಿಡುಗಡೆಗೊಳಿಸಲು ಈ ಆದೇಶ.

ಕ್ರಸಂ:ಜಿಪ/ಅಭಿವೃದ್ಧಿ/13ನೇಹ/ವಿವ-34/13-14 ದಿನಾಂಕ: 16 -12-2013

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸನ್-2013-14ನೇ ಸಾಲಿನ 13ನೇ ಹಣಕಾಸು ಆಯೋಗ ಯೋಜನೆಯಡಿ ಲೆಕ್ಕ ಶೀರ್ಷಿಕೆ -3054-80-196-1-04-300 - Block Grants - Lum sum ZP(ಯೋಜನೇತರ)(Link Head-3054-00-101-0-26) ರಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗೆ ಬಿಡುಗಡೆಯಾಗಿರುವ ಅನುದಾನವನ್ನು ಅನುಬಂಧದಲ್ಲಿ ತೋರಿಸಿರುವಂತೆ ಅನುಷ್ಠಾನ ಅಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರಿಗೆ ಈ ಕೆಳಗೆ ಕಾಣಿಸಿರುವ

ಅಂಕಣ (5)ರಲ್ಲಿನ ಅನುದಾನವನ್ನು ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರು ಬಿಡುಗಡೆ ಮಾಡತಕ್ಕದ್ದು.

(ರೂ.ಲಕ್ಷಗಳಲ್ಲಿ)

| ಅ.ನಂ | ವಿಭಾಗ | ಕಾಮಗಾರಿಗಳ ಸಂಖ್ಯೆ | ನಿಗದಿಪಡಿಸಿದ ಅನುದಾನ | ಪ್ರಸ್ತುತವಾಗಿ ಬಿಡುಗಡೆ ಮಾಡುವ ಅನುದಾನ |
|---|---|---|---|---|
| 1 | 2 | 3 | 4 | 5 |
| 1 | ಬೆಳಗಾವಿ | 97 | 305.46 | 305.46 |
| 2 | ಚಿಕ್ಕೋಡಿ | 155 | 539.48 | 539.48 |
| | **ಅಂತೂ ಒಟ್ಟು** | **252** | **844.94** | **844.94** |

ಅನುಷ್ಠಾನಾಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರು 13ನೇ ಹಣಕಾಸು ಆಯೋಗದ ಯೋಜನೆಯಡಿ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ ನಿಗದಿಪಡಿಸಿದ ಅನುದಾನದಲ್ಲಿಂದ ಈ ಕೆಳಗಿನ ಷರತ್ತಿಗೊಳಪಟ್ಟು ಖರ್ಚು ಭರಿಸಿ ಅನುಷ್ಠಾನಗೊಳಿಸತಕ್ಕದ್ದು.

**ಷರತ್ತುಗಳು:**

1) ಸರ್ಕಾರದ ಆದೇಶ ಸಂ:ಗ್ರಾಅಪ:127:ಆರ್‌ಆರ್‌ಸಿ:2013 ದಿನಾಂಕ: 11-06-2013 ಹಾಗೂ ಸರ್ಕಾರದ ಆದೇಶ ಸಂ: ಗ್ರಾಅಪ:140/ಆರ್‌ಆರ್‌ಸಿ/2013 ದಿನಾಂಕ:28-09-2013 ರಲ್ಲಿಯ ಷರತ್ತುಗೊಳಪಟ್ಟು ಕಾಮಗಾರಿ ಅನುಷ್ಠಾನಗೊಳಿಸತಕ್ಕದ್ದು.

2) 13 ನೇ ಹಣಕಾಸು ಆಯೋಗದ ಉನ್ನತ ಮಟ್ಟದ ಸಮಿತಿಯು ಕಾಮಗಾರಿಗಳ ಗುಣಮಟ್ಟ ನಿರ್ಧರಿಸಲು ಕಾಮಗಾರಿಗಳನ್ನು 3rd ಪಾರ್ಟಿ ತಪಾಸಣೆಗೆ ಒಳಪಡಿಸುವ ನಿಂಬಂಧನೆಗೊಳಪಡಿಸಿ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವದರಿಂದ ಅದರಂತೆ ಕಾಮಗಾರಿಗಳನ್ನು 3rd ಪಾರ್ಟಿ ತಪಾಸಣೆಗೆ ಕಡ್ಡಾಯವಾಗಿ ಒಳಪಡಿಸತಕ್ಕದ್ದು.

3) ಈ ಅನುದಾನವನ್ನು ಈಗಾಗಲೇ ಸನ್-2013-14 ನೇ ಸಾಲಿನಲ್ಲಿ ಅನುಮೋದನೆ ಆಗಿರುವ 13ನೇ ಹಣಕಾಸು ಆಯೋಗದ ಯೋಜನೆಯಡಿಯ ಕ್ರಿಯಾ ಯೋಜನೆಯಲ್ಲಿರುವ ರಸ್ತೆ ಕಾಮಗಾರಿ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದಲ್ಲ.

4) ಜಿಲ್ಲಾ ಪಂಚಾಯತಗಳು ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗದಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ಪೂರ್ಣವಾಗಿ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ನೋಡಿಕೊಳ್ಳತಕ್ಕದ್ದು. ಈ ಅನುದಾನ ನವೀಕರಣಕ್ಕೆ (Revalidation) ಯಾವುದೇ ಅವಕಾಶವಿರುವುದಿಲ್ಲ.

5) ಬಳಕೆ ಆದ ಹಣ ಹಾಗೂ ಕಾಮಗಾರಿ ಪ್ರಗತಿ ವಿವರವನ್ನು ಇಲಾಖೆಯ ವರ್ಕ ಸಾಫ್ಟ ವೆಬ್ ಸೈಟ್ ನಲ್ಲಿ upload ಮಾಡತಕ್ಕದ್ದು.

6) ರಸ್ತೆ ಮತ್ತು ಸೇತುವೆ ನಿರ್ವಹಣಾ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪ್ರತಿ ತ್ರೈಮಾಸಿಕ ಅವಧಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು.

7) ಈ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಮಾರ್ಚ-2013 ರೊಳಗೆ ಪೂರ್ಣಗೊಳಿಸತಕ್ಕದ್ದು.

8) ತಾಲೂಕುವಾರು ಹಂಚಿಕೆ ಅನುದಾನಕ್ಕೆ ಸೀಮಿತವಾಗಿ ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

9) ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ, ಪ್ರಗತಿಯಲ್ಲಿರುವ ಮತ್ತು ಮುಕ್ತಾಯದ ನಂತರ ರಸ್ತೆಯ ಛಾಯಾ ಚಿತ್ರಗಳನ್ನು ತೆಗೆದು ದಾಖಲಿಸುವುದು ಮತ್ತು ಸದರಿ ವೆಚ್ಚವನ್ನು ಸಂಬಂಧಪಟ್ಟ ಕಾಮಗಾರಿಯ ಅಂದಾಜು ಪಟ್ಟಿಗೆ ಸೇರಿಕೊಳ್ಳುವುದು.

10) ಸರ್ಕಾರದಿಂದ ನಿಗದಿಪಡಿಸಿರುವ ತಾಂತ್ರಿಕ ಮಾನದಂಡಗಳನ್ನು ಅನುಸರಿಸಬೇಕು.

11) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸ್ಥಳದಲ್ಲಿ ಮಾಹಿತಿ ಹಕ್ಕು ನಿಯಮಗಳ ಪ್ರಕಾರ ಸಾರ್ವಜನಿಕರ ಮಾಹಿತಿಗಾಗಿ ಕಾಮಗಾರಿಗಳ ಪೂರ್ಣ ವಿವರಗಳನ್ನು ನಾಮ ಫಲಕದಲ್ಲಿ ಅಳವಡಿಸಿಕೊಳ್ಳಬೇಕು.

12) ಕಾಮಗಾರಿಗಳ ಪ್ರಗತಿ ವರದಿಗಳನ್ನು ಪ್ರತಿ ತಿಂಗಳು 3 ನೇ ತಾರಿಖೀನೊಳಗೆ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಹಾಗೂ ತಪ್ಪದೇ ಪ್ರಗತಿ ವರದಿಯನ್ನು ವೆಬ್ ಸೈಟನಲ್ಲಿ ಅಳವಡಿಸಬೇಕು.

13) ಪ್ರತಿ ಕಾಮಗಾರಿಯು ಮುಕ್ತಾಯವಾದ ನಂತರ ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ದೃಢಿಕರಿಸಿ, ಮುಕ್ತಾಯ ಪ್ರಮಾಣ ಪತ್ರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

14) ಈ ಯೋಜನೆಯ ಪೂರ್ಣ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ವೆಚ್ಚದ ವಿವರಗಳನ್ನು ದಿನಾಂಕ: 15-04-2014 ರೊಳಗೆ ಯಾವುದೇ ನೆನಪೋಲೆಗೆ ಅವಕಾಶ ನೀಡದಂತೆ ಸರ್ಕಾರಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

(ದೀಪ ಚೋಳನ)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು: ಗೌರವಗಳೊಂದಿಗೆ ಸಲ್ಲಿಸಿದೆ.**

1) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು.
2) ಅಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.
3) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2) ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ /ಚಿಕ್ಕೋಡಿ.
3) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ಉಪ ವಿಭಾಗ ____________

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ರವಾನಿಸಿದೆ 18 DEC 2013
18/12/13

acer/viv-Raste mattu Nirvane anudan Releses.doc

18/12/13